Extent of Land under the Bannur Tank In T.-Narasipur Taluk

826. **Sri T. P. BORAIAH** (Bannur).—

Will the Minister of State for Minor Irrigation be pleased to state.—

(*a*) the extent of atchkat under the Bannur tank in T.-Narasipur taluk;

(*b*) how they are distributing the water of the said tank during summer season since ten years;

(*c*) the extent of land under the said tank where there is sugarcane, paddy and summer crops now?

Sri D. PARAMESHWARAPPA (Deputy Minister for Major Irriigation and Electricity) [On behalf Sri A. J. **DODDAMETI** (Minister of State for Minor Irrigation)].—

(*a*) 2,600 acres.

(*b*) Water is being supplied from left and right bank branch canals since ten years.

(*c*) Sugar cane about 100 acres.
Paddy about 100 acres
Other crops about 500 acres.

ಶ್ರೀ ಟಿ. ಪಿ. ಬೋರಯ್ಯ.—(ಅ)ಗೆ ಉತ್ತರವಾಗಿ ಎಡ ಮತ್ತು ಬಲದಂಡೆ ನಾಲೆಗಳಿಂದ ಅಚ್‌ಕಟ್ಟಿಗೆ ನೀರು ಸರಬರಾಜು ಆಗುತ್ತದೆಂದು ಹೇಳಿದೆ. ಈ 2,600 ಎಕರೆಗೆ ಬೇಸಿಗೆಕಾಲದಲ್ಲಿ ನೀರು ದೊರೆಯದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಶ್ರೀ ಡಿ. ಪರಮೇಶ್ವರಪ್ಪ.—ಬಂದಿದೆ.

ಶ್ರೀ ಟಿ. ಪಿ. ಬೋರಯ್ಯ.—ಈ ನೀರಿನ ಸರಬರಾಜನ್ನು ಉತ್ತಮಪಡಿಸುವುದಕ್ಕೆ ಏನು ಕ್ರಮ ತೆಗೆದುಕೊಂಡಿದ್ದೀರಾ? ಕೆರೆಯ ಅಭಿವೃದ್ಧಿ ಕ್ರಮ ಕೈಗೊಂಡಿದ್ದೀರಾ?

ಶ್ರೀ ಡಿ. ಪರಮೇಶ್ವರಪ್ಪ.—ಕೆರೆಯ ಅಭಿವೃದ್ಧಿ ಕಾರ್ಯಕ್ರಮ ತೆಗೆದುಕೊಳ್ಳಲಾಗುತ್ತದೆ. ಅದು ಬ್ಯಾಲೆನ್ಸಿಂಗ್ ರಿಜರ್‌ವಾಯರ್ ಬನ್ನೂರ ಟ್ಯಾಂಕ್ ಕೆನಾಲ್ ದುರಸ್ತು ಮಾಡಿದರೆ ಇನ್ನೂ ಹೆಚ್ಚಿಗೆ ಜಮೀನು ಇರ್ರಿಗೇಟ್ ಮಾಡಬಹುದು.

ಶ್ರೀ ಟಿ. ಪಿ. ಬೋರಯ್ಯ.—ಬನ್ನೂರ್ ಕೆರೆಯ ಕ್ಯಾಚ್‌ಮೆಂಟು ಎಷ್ಟು? ಆ ಕೆರೆಯಲ್ಲಿ ನೀರನ್ನು ತುಂಬಿಸಿಕೊಂಡು ಅಚ್‌ಕಟ್ಟುದಾರರಿಗೆ ಬೇಸಿಗೆಯಲ್ಲಿ ನೀರು ಸರಬರಾಜು ಮಾಡುತ್ತೀರಾ? ಈಗ ರೈತರಿಗೆ ಬೇಸಿಗೆಕಾಲದಲ್ಲಿ ನಿಯಂತ್ರಣವಾಗಿ ನೀರನ್ನು ಕೊಡುವುದರಿಂದ ಬೆಳೆಗೆ ಬಹಳವಾಗಿ ನಷ್ಟವಾಗುತ್ತಾ ಇರುವುದು ತಮ್ಮ ಗಮನಕ್ಕೆ ಬಂದಿದೆಯೇ?

ಶ್ರೀ ಡಿ. ಪರಮೇಶ್ವರಪ್ಪ.—ನನ್ನ ಗಮನಕ್ಕೆ ಬಂದಿಲ್ಲ. ಹಾಗೆ ಇದ್ದರೆ ಅದರ ಬಗ್ಗೆ ತಕ್ಕ ಕ್ರಮ ತೆಗೆದುಕೊಳ್ಳುತ್ತೇವೆ.